**<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಈ ದಿನ ಅಂದರೆ ದಿನಾಂಕಃ 07-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಎಸ್.ಪಿ., ಆರೋಪಿ ಪರ ವಕೀಲರಿಂದಃ</u>**

**4.** 2019 ನೇ ಇಸ್ವಿಯಲ್ಲಿ ರೇವಂತ ಅಟೋ ಮಾರ್ಟ ಅಂತಾ ಪ್ರಾರಂಭ ಮಾಡಿರುತ್ತೇನೆ. ದ್ವಿತೀಯ ದರ್ಜೆ ವಾಹನ ಮಾರಾಟ ಮಾಡುವುದಕ್ಕಿಂತ ಮುಂಚೆ ನಾನು ಚೋಳಮಂಡಲ ಫೈನಾನ್ಸನಲ್ಲಿ ಸೇಲ್ಸ ಆಫೀಸರ ಆಗಿ ಕೆಲಸ ಮಾಡುತ್ತಿದ್ದೆ. ರೇವಂತ ಅಟೋ ಮಾರ್ಟಗೆ ಸಂಬಂಧಿಸಿದಂತೆ ಪರವಾನಿಗೆಯನ್ನು ಹಾಜರಪಡಿಸಲು ತೊಂದರೆ ಇರುವುದಿಲ್ಲ. ರೇವಂತ ಅಟೋ ಮಾರ್ಟಗೆ ಸಂಬಂಧಿಸಿದಂತೆ 2019-2020, 2020-2021 ನೇ ಇಸ್ವಿಯಲ್ಲಿ ಇನ್-ಕಂ ಟ್ಯಾಕ್ಸ ರೀಟರ್ನ ಮಾಡಿರುತ್ತೀರಾ ಅಂದರೆ ಮಾಡಿರುತ್ತೇನೆ. 2019-2020, 2020-2021 ನೇ ಸಾಲಿನ ರೇವಂತ ಅಟೋ ಮಾರ್ಟಗೆ ಸಂಬಂಧಿಸಿದ ಇನ್ ಕಂ ಟ್ಯಾಕ್ಸ ರೀಟರ್ನ ದಾಖಲೆಯನ್ನು ಹಾಜರಪಡಿಸುತ್ತೀರಾ ಅಂದರೆ ಹಾಜರಪಡಿಸುತ್ತೇನೆ. ಆರೋಪಿಗೆ ರೂ. 4.00 ಲಕ್ಷ ಕೊಟ್ಟಂತಹ ಹಣವನ್ನು ತೆರಿಗೆ ಪಾವತಿಯಲ್ಲಿ ತೋರಿಸದೆ ಸರ್ಕಾರಕ್ಕೆ ಮೋಸ ಮಾಡಿರುತ್ತೇನೆ ಅಂದರೆ ನನ್ನ ಜಮೀನಿನಿಂದ ಬಂದ ಆದಾಯವನ್ನು ಆರೋಪಿಗೆ ಕೊಟ್ಟಿರುತ್ತೇನೆ. ನಿಮ್ಮ ದೂರಿನಲ್ಲಿ ಜಮೀನಿಂದ ಬಂದ ಆದಾಯವನ್ನು ಕೊಟ್ಟಿರುತ್ತೇನೆ ಅಂತಾ ತೋರಿಸಿರುತ್ತೀರಾ ಅಂದರೆ ಇಲ್ಲಾ. ನಿಮ್ಮ ದೂರಿನಲ್ಲಿ ವ್ಯಾಪಾರ, ಶೇತ್ಕಿ, ಆಟೋ ಮಾರ್ಟ ಅಂತಾ ಬರೆಸಿರುತ್ತೀರಿ ಅಂದರೆ ಹೌದು. ಆರೋಪಿ ಯಾವ ದಿನಾಂಕ, ತಿಂಗಳು, ಇಸ್ವಿಯಲ್ಲಿ ನಿಮ್ಮಿಂದ ಹಣ ಪಡೆದುಕೊಂಡಿರುತ್ತಾರೆ ಅಂತಾ ಹೇಳಲು ಆಗುತ್ತದೆಯೇ ಅಂದರೆ 2019 ಹಣ ಪಡೆದುಕೊಂಡಿದ್ದು, ದಿನಾಂಕ, ತಿಂಗಳು ನೆನಪಿಲ್ಲ. ದಿನಾಂಕಃ 18-04-2019 ರಂದು ಆರೋಪಿಗೆ ಹಣ ಕೊಟ್ಟಿರುತ್ತೇನೆ. ಆರೋಪಿಗೆ ನೀಡಿದ ಹಣವನ್ನು ನಮ್ಮ ಮನೆಯಲ್ಲಿಯೇ ಕೊಟ್ಟಿರುತ್ತೇನೆ. ನಾನು ನಮ್ಮ ಮನೆಯಲ್ಲಿ ಆರೋಪಿಗೆ ಹಣವನ್ನು ಕೊಡುವಾಗ ನಾನು, ಆರೋಪಿ, ಕಿರಣ ಹಿತ್ತಲಮನಿ ಎನ್ನುವವರು ಇದ್ದರು. ಹಣ ಪಡೆದುಕೊಳ್ಳುವಾಗ ಅವರಿಬ್ಬರೂ ಜೊತೆಯಲ್ಲಿ ಬಂದಿದ್ದರು. ಕಿರಣ ಹಿತ್ತಲಮನಿ ಎನ್ನುವವರು ಆರೋಪಿಯ ಸ್ನೇಹಿತರು. ಕಿರಣ ಹಿತ್ತಲಮನಿ ಇವರನ್ನು ಕರೆಯಿಸಿ ವಿಚಾರಣೆ ಮಾಡಲು ತೊಂದರೆ ಇಲ್ಲಾ ಅಂದರೆ ತೊಂದರೆ ಇರುವುದಿಲ್ಲ. ಆರೋಪಿಗೆ ಹಣ

ಕೊಡುವಾಗ ಯಾವ್ಯಾವ ದಾಖಲೆಗಳನ್ನು ಪಡೆದುಕೊಂಡಿರುತ್ತೀರಿ ಅಂದರೆ ಚೆಕ್‌ನ್ನು ಪಡೆದುಕೊಂಡಿರುತ್ತೇನೆ. ಚೆಕ್‌ನ್ನು ಹೊರತುಪಡಿಸಿ ಬೇರೆ ಯಾವ ದಾಖಲೆ ಪಡೆದಿರುತ್ತೀರಿ ಅಂದರೆ ಯಾವುದು ಇಲ್ಲಾ. ಆರೋಪಿಗೆ ಕೊಟ್ಟೆ ಅಂತಾ ಹೇಳುವ ಹಣ ನಾನು ಕೆಲಸ ಮಾಡಿದ್ದು ಹಾಗೂ ವ್ಯವಸಾಯದಿಂದ ಬಂದ ಹಣವಾಗಿರುತ್ತದೆ.

**5.** ನಮ್ಮ ತಂದೆಗೆ ನಾವು ಇಬ್ಬರೂ ಗಂಡು ಮಕ್ಕಳು ಇರುತ್ತೇವೆ. ನೀವು ನಿಮ್ಮ ತಂದೆ-ತಾಯಿ ಹಾಗೂ ನಿಮ್ಮ ತಮ್ಮ ಸೇರಿಯೇ ಇರುತ್ತೇವೆ ಅಂದರೆ ಮೊದಲು ಜೊತೆಗೆ ಇದ್ದು, ಈಗ ಹಾವೇರಿಯಲ್ಲಿ ವಾಸ ಮಾಡುತ್ತಿದ್ದೇವೆ. ಕಳ್ಳಿಹಾಳದಿಂದ ಹಾವೇರಿಗೆ ಬಂದು ವಾಸ ಮಾಡುತ್ತಿದ್ದು ಈಗ 1 ವರೆ ವರ್ಷ ಆಗಿರುತ್ತದೆ. ನಿಮ್ಮ ಕುಟುಂಬಕ್ಕೆ ಕಳ್ಳಿಹಾಳ ಗ್ರಾಮದಲ್ಲಿ ಒಂದು ಎಕರೆ ಜಮೀನು ಇದೆ ಅಂದರೆ ಹೌದು. ನಿಮ್ಮ ಒಟ್ಟು ಕುಟುಂಬಕ್ಕೆ ಕಳ್ಳಿಹಾಳ ಗ್ರಾಮದಲ್ಲಿ ಪಡಿತರ ಚೀಟಿ ಇದೆ ಎಂದರೆ ಹೌದು. ಆ ಪಡಿತರ ಚೀಟಿಯ ಮೂಲಕ ಕಳ್ಳಿಹಾಳ ಗ್ರಾಮದಲ್ಲಿ ರೇಶನ ಪಡಿಯುತ್ತೀರಿ ಅಂದರೆ ಹೌದು. ನಮ್ಮ ಕುಟುಂಬಕ್ಕೆ ಬಿಪಿಎಲ್ ಪಡಿತರ ಚೀಟಿ ಇರುತ್ತದೆ.

**6.** ಆರೋಪಿ ಯಾವ ಕೆಲಸ ಮಾಡುತ್ತಾರೆ ಅಂದರೆ ಕಾರ ತೆಗೆದುಕೊಳ್ಳುವುದು, ಮಾರುವುದು ಕೆಲಸ ಮಾಡುತ್ತಾರೆ. ಆರೋಪಿ ಮತ್ತು ನೀವು ಒಂದೇ ತರಹದ ವ್ಯಾಪಾರ ಮಾಡುತ್ತಿದ್ದೀರಿ ಅಂದರೆ ಹೌದು. ಆರೋಪಿ ನಿಮ್ಮ ಕಡೆಯಿಂದ ಸೆಕೆಂಡ ಹ್ಯಾಂಡ ಕಾರಗಳನ್ನು ತೆಗೆದುಕೊಂಡು ಮಾರಾಟ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಕಾರಗಳನ್ನು ಕೊಡಿಸುವ ಕೆಲಸ ಮಾಡುತ್ತಿದ್ದರು. ಈ ವ್ಯವಹಾರ ಆಗುವುದಕ್ಕಿಂತ ಮೊದಲು ಬೇರೆ ಯಾವುದೇ ವ್ಯವಹಾರ ಆಗಿತ್ತಾ ಅಂದರೆ ಇಲ್ಲಾ. ನಿಮ್ಮ ನೋಟಿಸನಲ್ಲಿ ಆರೋಪಿ ಈ ಹಿಂದೆ ಹಣದ ವ್ಯವಹಾರ ಮಾಡುತ್ತಿದ್ದೇವು ಅಂತಾ ಬರೆಸಿದ್ದು ನಿಜ ಇರುತ್ತದೆ. ಈ ಹಿಂದೆ ಹಣದ ವ್ಯವಹಾರ ಇಲ್ಲಾ ಅಂತಾ ಹೇಳಿದ್ದು, ನೋಟಿಸನಲ್ಲಿ ಹಣದ ವ್ಯವಹಾರ ಇದೆ ಅಂತಾ ಹೇಳಿದ್ದು ಅದನ್ನು ಸಮರ್ಥಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ಆರೋಪಿ ನಿಮಗೆ ಯಾವ ರೀತಿ ಪರಿಚಯ ಅಂದರೆ ನಾನು ಚೋಳಮಂಡಲ ಫೈನಾನ್ಸನಲಿ ಕೆಲಸ ಮಾಡುವಾಗ, ಆರೋಪಿ ಹಲವಾರು ವ್ಯಕ್ತಿಗಳನ್ನು ಕರೆದುಕೊಂಡು

ಬಂದು ಲೋನ ಕೊಡಿಸುವ ಕೆಲಸ ಮಾಡುತ್ತಿದ್ದರು. ಈ ವ್ಯವಹಾರ ಆಗುವುದಕ್ಕಿಂತ ಮೊದಲು ಹಲವಾರು ವ್ಯವಹಾರಗಳು ನಡೆದಿತ್ತು ಅಂದರೆ, ಈ ಮುಂಚೆ ವ್ಯವಹಾರಗಳು ನಡೆದಿದ್ದು, ಚೆಕ್‌ಗಳನ್ನು ನೀಡಿದ್ದು, ಆ ಚೆಕ್‌ಗಳಿಗೆ ಸಂಬಂಧಿಸಿದಂತೆ ಹಣವನ್ನು ಕೊಟ್ಟಿರುತ್ತಾರೆ. ಖಾಲಿ ಚೆಕ್‌ಗಳನ್ನು ಆರೋಪಿ ಕೊಟ್ಟಿಲ್ಲ, ಬರೆದುಕೊಟ್ಟ ಚೆಕ್‌ಗಳನ್ನು ಹುಡುಕಬೇಕು. ಆ ರೀತಿ ಬರೆದುಕೊಳ್ಳ ಚೆಕ್‌ಗಳು ಸಿಕ್ಕರೆ ಅವುಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಬಲ್ಲೆ. ಊ.ಆ.ಇ.ಈ ಬ್ಯಾಂಕ್ ಎಲ್ಲಿದೆ ಅಂತಾ ಹೇಳಲು ಆಗುತ್ತದೆ ಅಂದರೆ ಆ ಬ್ಯಾಂಕ್ ಇಲ್ಲಾ. ಊ.ಆ.ಇ.ಈ ಬ್ಯಾಂಕ್ ಹಿಂಬರಹ ನೀಡಿರುತ್ತಾರೆ ಅಂತಾ ಸೃಷ್ಠಿ ಮಾಡಿಕೊಂಡಿರುತ್ತೀರಾ ಅಂದರೆ ಸರಿಯಲ್ಲ. ಊ.ಆ.ಇ.ಈ ಅಂತಾ ಯಾವುದೇ ಬ್ಯಾಂಕ್ ಇರುವುದಿಲ್ಲ, ನೀವೆ ಸೃಷ್ಠಿ ಮಾಡಿಕೊಂಡಿದ್ದು, ನಿಮ್ಮ ಪ್ರಕರಣವನ್ನು ಕಿತ್ತು ಹಾಕಬಹುದು ಅಂದರೆ ಸರಿಯಲ್ಲ.

**7.** ಆರೋಪಿ ಕೊಟ್ಟ ಚೆಕ್‌ನ್ನು ದಿನಾಂಕಃ 15-07-2019 ರಂದು ನಗದೀಕರಣಕ್ಕೆ ಹಾಕಿರುತ್ತೇನೆ. ದಿನಾಂಕಃ 17-07-2019 ರಂದು ಬ್ಯಾಂಕಿನವರು ಫಂಡ ಇನ್‌ಸಫಿಸಿಯೆಂಟ್ ಅಂತಾ ಕೊಟ್ಟಿರುತ್ತಾರೆ. ಆರೋಪಿಯನ್ನು ಹಲವಾರು ಬಾರಿ ಬೇಟೆಯಾಗಿರುತ್ತೇನೆ ಅಂತಾ ಹೇಳಿದ್ದು, ಯಾವ ಯಾವ ದಿನಾಂಕದಂದು ಬೇಟಿಯಾಗಿರುತ್ತೇನೆ ಅಂತಾ ಗೊತ್ತಿಲ್ಲ. ಬ್ಯಾಂಕನಿಂದ ಹಿಂಬರಹ ಬಂದ ನಂತರ ನಾನು ಆರೋಪಿಯನ್ನು ಭೇಟ್ಟಿಯಾಗಿರುವುದಿಲ್ಲ. ಚೆಕ್ ಸ್ವೀಕೃತವಾದ ಬಗ್ಗೆ ಆರೋಪಿಗೆ ತಿಳಿದಾಗ್ಯೂ ಕೂಡಾ ಆರೋಪಿ ಹಣ ಪಾವತಿ ಮಾಡಿರುವುದಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ. ವಕೀಲರ ಮೂಲಕ ಆರೋಪಿಗೆ ನೋಟಿಸನ್ನು ಯಾವ ದಿನಾಂಕದಂದು ಕಳುಹಿಸಿದ್ದೀರಾ ಅಂದರೆ ದಿನಾಂಕಃ 22-07-2019 ರಂದು ಕಳುಹಿಸಿರುತ್ತೇನೆ.

**8.** ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಹಣ ಕೊಟ್ಟು ಆತನು ಸರಿಯಾದ ಸಮಯಕ್ಕೆ ಹಣ ಪಾವತಿ ಮಾಡದೇ ಇದ್ದರೆ, ಆತನಿಗೆ ಮತ್ತೊಮ್ಮೆ ಹಣ ಕೊಡುವ ಪ್ರಸಂಗ ಬರುವುದಿಲ್ಲ ಅಂದರೆ ಸರಿ. ಆರೋಪಿಯು ಸೆಕೆಂಡ್ ಹ್ಯಾಂಡ ವೆಹಿಕಲ್ ಮಾರಾಟ

ಮಾಡುವ ಮೂಲಕ ಮತ್ತು ಪಡೆದುಕೊಳ್ಳುವ ಮೂಲಕ ಸಾಕಷ್ಟು ಆದಾಯ ಇದೆ ಅಂದರೆ ಆದಾಯ ಇದೆ. ಆರೋಪಿ ಸ್ವಂತವಾಗಿ ಹಣ ಹೂಡಿಕೆ ಮಾಡಿ ವಾಹನವನ್ನು ಮಾರಾಟ ಮಾಡುತ್ತಾರೆ ಅಂದರೆ ಹೌದು. ಆರೋಪಿಗೆ ಸ್ವಂತಕ್ಕೆ 8 ರಿಂದ 10 ಎಕರೆ ಕೃಷಿ ಜಮೀನು ಇದೆ ಅಂದರೆ ಗೊತ್ತಿಲ್ಲ. ಅದೇ ರೀತಿ ಆರೋಪಿಗೆ ಹಾವೇರಿಯಲ್ಲಿ ಸ್ವಂತ ಆರ್ ಸಿಸಿ ಮನೆ ಇದೆ ಅಂದರೆ ಇದೆ. ಆರೋಪಿ ಆರ್ಥಿಕವಾಗಿ ಸದೃಢವಾದ ವ್ಯಕ್ತಿ ಇರುತ್ತಾನೆ ಅಂದರೆ ಸರಿ. ಆರೋಪಿಗೆ ಸಾಕಷ್ಟು ಜಮೀನು, ಮನೆ, ವ್ಯವಹಾರ ಇರುವುದರಿಂದ, ನಿಮ್ಮ ಕಡೆಯಿಂದ ಹಣವನ್ನು ತೆಗೆದುಕೊಳ್ಳುವ ಪ್ರಸಂಗವೇ ಬಂದಿರುವುದಿಲ್ಲ ಅಂದರೆ ಆರೋಪಿಗೆ ನಾನು ಹಣ ಕೊಟ್ಟ ನಂತರವೇ ವಾಹನವನ್ನು ಖರೀದಿ ಮಾಡುವುದು ಮಾರಾಟ ಮಾಡುವುದು ಮಾಡಿರುತ್ತಾರೆ. ನೀವು ನಿಮ್ಮ ಫಿರ್ಯಾದಿಯಲ್ಲಿ ಹೇಳಿರುವಂತೆ ನಿಮ್ಮ ಮತ್ತು ಆರೋಪಿಯ ಮಧ್ಯ ಯಾವುದೇ ಹಣದ ವ್ಯವಹಾರ ಆಗಿಲ್ಲ ಅಂದರೆ ಸರಿಯಲ್ಲ. ಆರೋಪಿಗೆ ರೂ. 4.00 ಲಕ್ಷ ಹಣ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ನಿಮಗೆ ಇರುವುದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ- **07-11-2024**
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.